ಎಂದು ದಿಟ್ಟವಾಗಿ ಬರೆಯುತ್ತಾರೆ. 'ಸಿದ್ಧಾಂತಗಳೇ ಕವಿತೆಯಾದರೆ ಹೇಗೆ?' ಎಂದು ಪ್ರಶ್ನಿಸಿದ್ದಾರೆ. ಕವಿತೆ ಕಥನಲಯ ಹಿಡಿದರೂ ಪ್ರತಿಮಾಶಕ್ತಿ ಮತ್ತು ರೂಪಕಶಕ್ತಿಯನ್ನು ಮರೆತಿಲ್ಲ ಎಂಬುದು ಅವರ ಪುಟ್ಟ ಸಮಾಧಾನ. ತಮ್ಮ ಘಾರಂ ಯಾವುದು ಎಂದು ತಿಳಿಯಬೇಕಾದುದು ಕವಿಗಳ ಅಗತ್ಯ ಎನ್ನುವ ಅವರು ಸಂಕಲನದಲ್ಲಿ ಒಂದು ಕವಿತೆ ನಿಜದ ಕವಿತೆಯಾಗಿ ಗೋಚರಿಸಿದರೆ ಇನ್ನುಳಿದ ಇಪ್ಪತ್ತು ಕವಿತೆಗಳು ಬರೀ ಮಾತುಗಳಾಗಿ ಇರುತ್ತವೆ. ಜೀವಂತ ಕವಿತೆಯನ್ನು ನೀಡುವ ಧ್ಯಾನಸ್ಥ ಸ್ಥಿತಿಯನ್ನು ಕವಿಗಳು ಮರೆಯುತ್ತಿದ್ದಾರೆ, ಕವಿತೆ ಎಂದು ಬರೆಯುವಾಗ ಅದನ್ನು 'ಕವಿತೆ'ಯಾಗಿಸುವುದಕ್ಕೆ ಪ್ರಯತ್ನಿಸಬೇಕು ಎಂದು ಕಿವಿಮಾತು ಹೇಳಿದ್ದಾರೆ. ಸ್ಥಳೀಯ ಪ್ರತಿಮೆಗಳ ಮೂಲಕವೇ ಲೋಕವನ್ನು ಆವರಿಸುವ ಶಕ್ತಿಯನ್ನು ಕವಿ ಪಡೆಯುತ್ತಾನೆ ಎಂದು ಪ್ರತಿಪಾದಿಸುವ ಅವರು ಅದು ಖಾಲಿಯಾದಲ್ಲಿ ಕವಿಯೊಬ್ಬ ಮುಗಿದಂತೆ, ಅಲ್ಲದೆ, ನಮ್ಮ ಸಾಹಿತ್ಯ ಶಕ್ತಿಗಳನ್ನು ಉಳಿಸಿಕೊಳ್ಳಲು ಸ್ವಂತೀಕರಣಕ್ಕೆ ಹಾತೊರೆಯಬೇಕು ಎಂದು ಅಭಿಪ್ರಾಯ ಪಡುತ್ತಾರೆ. ಕ್ಷಣದ ತೀರ್ಮಾನಗಳೇ ಕವಿತೆಯೊಳಗಿನ ಜೀವನ ಕಾಣ್ಕೆ ನಿರ್ಧರಿಸುವುದರ ಬಗ್ಗೆ ಆತಂಕಗೊಳ್ಳುವ ಲೇಖಕರು ಕಾಣ್ಕೆಯ ಸ್ವರೂಪ ನಿರ್ಧರಿಸುವಲ್ಲಿ ಇರುವ ದ್ವಂದ್ವದ ಬಗ್ಗೆ ಗಮನ ಸೆಳೆಯುತ್ತಾರೆ. ಕವಿತೆಯು ತನ್ನ ಆಂತರಿಕ ಸಂವಹನವನ್ನು ವೃದ್ಧಿಸಿಕೊಳ್ಳಬೇಕು ಎಂಬುದು ಅವರ ಸೂಚನೆ. ಈ ಹಿನ್ನೆಲೆಯಲ್ಲಿ ಹಲವು ಕವಿಗಳ ಕುರಿತು ಪ್ರತ್ಯೇಕವಾಗಿ ಚರ್ಚಿಸುತ್ತ ಸ್ಪಷ್ಟ ನಿಲುವು ತಾಳಿದ್ದಾರೆ.

ಹೀಗೆ ಸಮೃದ್ಧ ಗಮನಿಸುವಿಕೆ, ಆಲೋಚನಾ ಸರಣಿಯ ಮೂಲಕ ಬೆರಗು ಹುಟ್ಟಿಸುವ ಈ ಕೃತಿ ಕೆಲವೆಡೆ ನಾವು ವಿವರ ಬೇಡುವಂತೆಯೂ ಮಾಡುತ್ತದೆ. 'ಆಡುಮಾತಿನ ಲಯಕ್ಕೆ ಅನುಗುಣವಾಗಿ ಕವಿಗಳು ಮಾಡಿಕೊಳ್ಳುತ್ತಿರುವ ತಾತ್ವಿಕ ಚೌಕಟ್ಟು!...' ಎಂದು ಬರೆಯುವಲ್ಲಿ ಇವೆರಡರ ನಡುವಿನ ಸಾಮ್ಯ ಸಾಧ್ಯತೆಯ ಕುರಿತ ಪ್ರಶ್ನೆ ಉಳಿದುಬಿಡುತ್ತದೆ. 'ತತ್ವ – ತತ್ವಶಾಸ್ತ್ರ – ತಾತ್ವಿಕತೆ' ಕುರಿತ ಗೊಂದಲವೊಂದು ಇಡೀ ಕೃತಿಯಲ್ಲಿ ಹರಿದಾಡಿದೆ. ನಮ್ಮ ಹಿರಿಯ ಜೀವಗಳು ಕವಿತೆಗೆ ಬೇಕಾದ ಆಕಾರಗಳನ್ನು ಸ್ವಅನುಭವ ಮತ್ತು ಭಾರತೀಯ ತತ್ವಶಾಸ್ತ್ರೀಯ ನೆಲೆಗಳಿಂದ ಪಡೆಯುತ್ತಿದ್ದರು ಎಂಬ ನಿಲುವು ಕೂಡ ಪ್ರಶ್ನಾರ್ಹ. ಪಾಶ್ಚಾತ್ಯ ಮತ್ತು ಪೌರಾತ್ಯ ತತ್ವಶಾಸ್ತ್ರೀಯ ನೆಲೆಗಳೊಟ್ಟಿಗೆ ಹಲವು ಜಾಗತಿಕ ಕಾವ್ಯಸತ್ಯಗಳೂ ಕನ್ನಡ ಕಾವ್ಯವನ್ನು ಪ್ರಭಾವಿಸಿರುವುದನ್ನು ನಾವು ಗಮನಿಸಬಹುದು. ತತ್ವಶಾಸ್ತ್ರೀಯ ನೆಲೆಗೂ ತಾತ್ವಿಕತೆಯ ನೆಲೆಗೂ ಮತ್ತು ಅವುಗಳ ಸ್ಫೂರ್ತಿಗೂ ಇರುವ ವ್ಯತ್ಯಾಸ ಸಮರ್ಪಕವಾಗಿ ವಿಶ್ಲೇಷಣೆಗೆ ಒಳಪಟ್ಟಿಲ್ಲ. ಬಹುತ್ವ ಮತ್ತು ನವರಾಷ್ಟ್ರೀಯತೆಯ ಬಿಕ್ಕಟ್ಟಿನ ನಡುವೆ ಮುಗ್ಧಲೋಕವೊಂದು ಮಾಯವಾಗುವ ಸ್ಥಿತಿಯಿದ್ದು ಹೊಸಬರ ಕವಿತೆ ಇದನ್ನು ತಾಕಬೇಕು ಎಂಬ ಲೇಖಕರ ನಿಲುವು ದಿಟ್ಟವಾಗಿದೆ. ಹಾಗಿದ್ದಲ್ಲಿ ಈ ಮುಗ್ಧಲೋಕವು ಮಧ್ಯಮ ಮಾರ್ಗವಿರಬಹುದೇ ಎಂಬುದರ ಕುರಿತು ಚರ್ಚೆಯ ಅಗತ್ಯವಿದೆ. ಹೊಸ ಕವಿಗಳ ಒಂದೆರಡು ಸಾಲುಗಳ ಆಧಾರದಲ್ಲಿ ಸಮಕಾಲೀನ ಕಾವ್ಯಗಮ್ಯ ಗುರುತಿಸುವ ಅವಸರವೂ ಅಲ್ಲಲ್ಲಿ ಇದೆ.

ಇದರಾಚೆಯೂ ಕೃತಿಯ ಮಹತ್ವವಿರುವುದು ಅದರ ಬದ್ಧತೆ ಮತ್ತು ಒಳಗೊಳ್ಳುವಿಕೆಯ ಮುಕ್ತ ವಿಚಾರಸರಣಿಯಲ್ಲಿ. ಕೀರ್ತಿನಾಥ ಕುರ್ತಕೋಟಿಯವರ 'ನವ್ಯಕಾವ್ಯ ಪ್ರಯೋಗ'ದಂಥ ನವೋದಯ ಮತ್ತು ನವ್ಯ ಸಂದರ್ಭದ ಒಂದೆರಡು ಪ್ರಯತ್ನ ಹಾಗು ಸಾಹಿತ್ಯ ನಿಯತಕಾಲಿಕೆಗಳ ಕೆಲ ಪ್ರಯತ್ನಗಳನ್ನು ಹೊರತು ಪಡಿಸಿದರೆ ಸಮಕಾಲೀನ ಕಾವ್ಯದ ಕುರಿತ ಇಂತಹ ಹೊತ್ತಗೆಗಳು ವಿರಳ. ಸಾಹಿತ್ಯ ವಿಚಾರ ಮತ್ತು ವಿಮರ್ಶೆಯ ಹಲವು ಆಯಾಮಗಳತ್ತ ಇದು ಗಮನ ಸೆಳೆಯುತ್ತದೆ. ಸ್ವೀಕರಿಸಿ ನಡೆಸಿದರೂ, ನಿರಾಕರಿಸಿ ನಡೆಸಿದರೂ ಮುಂದಿನ ಎಲ್ಲ ಚರ್ಚೆಗೆ ಆಕರ ಸ್ವರೂಪಿಯಾಗಿ ನಿಲ್ಲುವುದು ಈ ಕೃತಿಯ ಹೆಗ್ಗಳಿಕೆ. ಹೊಸಕಾಲದ ಕಾವ್ಯ ಮಾತ್ರವಲ್ಲ ಒಟ್ಟು ಸಾಹಿತ್ಯದ ವಿವೇಚನೆಗೆ ಇರುವ ಬಹುದಾರಿಗಳತ್ತ ಇದು ಕೈ ತೋರಿಸಿದೆ. ●